ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ಸದಸ್ಯರ ಹೆಸರು	:	ಶ್ರೀ ಆರ್.ಪ್ರಸನ್ನ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**1261**
ಉತ್ತರಿಸಬೇಕಾದ ದಿನಾಂಕ	:	17.03.2021
ಉತ್ತರಿಸಬೇಕಾದ ಸಚಿವರು	:	ವಸತಿ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಶಿವಮೊಗ್ಗ ಜಿಲ್ಲೆಯಲ್ಲಿ ರಾಜೀವ್ ಗಾಂಧಿ ವಸತಿ ನಿಗಮ, ಬಸವ ವಸತಿ ಯೋಜನೆ ಹಾಗೂ ವಾಜಪೇಯಿ ವಸತಿ ಯೋಜನೆಯಡಿಯಲ್ಲಿ ಕಳೆದ ಎರಡು ವರ್ಷದಲ್ಲಿ ಎಷ್ಟು ಮನೆಗಳು ನಿರ್ಮಾಣವಾಗಿವೆ;	ಕಳೆದ ಎರಡು ಆರ್ಥಿಕ ವರ್ಷಗಳಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ಬಸವ ವಸತಿ ಯೋಜನೆ ಹಾಗೂ ವಾಜಪೇಯಿ ನಗರ ವಸತಿ ಯೋಜನೆಯಡಿಯಲ್ಲಿ ಒಟ್ಟು 6881 ಮನೆಗಳನ್ನು ನಿರ್ಮಾಣ ಮಾಡಲಾಗಿದೆ. ಯೋಜನವಾರು ಮತ್ತು ವರ್ಷವಾರು ವಿವರ ಈ ಕೆಳಕಂಡಂತಿದೆ.

ಯೋಜನೆ	ಶ್ರೇಣಿ	ಗುರಿ
ಬಸವ ವಸತಿ ಯೋಜನೆ	2018-19	4427
	2019-20	1811
ಒಟ್ಟು		**6238**
ವಾಜಪೇಯಿ ನಗರ ವಸತಿ ಯೋಜನೆ	2018-19	440
	2019-20	203
ಒಟ್ಟು		**643**
ಒಟ್ಟಾರೆ		**6881**

ಕ್ರ.ಸಂ	ಪ್ರಶ್ನೆ	ಉತ್ತರ
ಆ)	ಪ್ರಸ್ತುತ ಸಾಲಿನಲ್ಲಿ ಮೇಲ್ಕಂಡ ನಿಗಮಗಳ ವತಿಯಿಂದ ಎಷ್ಟು ಮನೆಗಳನ್ನು ನಿರ್ಮಿಸಲು ಕ್ರಮ ಕೈಗೊಳ್ಳಲಾಗಿದೆ; (ತಾಲ್ಲೂಕುವಾರು ಮಾಹಿತಿ ನೀಡುವುದು)	2020-21 ನೇ ಸಾಲಿನ ಆರ್ಥಿಕ ವರ್ಷದಲ್ಲಿ ಶಿವಮೊಗ್ಗ ಜಿಲ್ಲೆಯ ಒಟ್ಟು 1850 ಮನೆಗಳನ್ನು ನಿರ್ಮಿಸುವ ಉದ್ದೇಶ ಹೊಂದಲಾಗಿದ್ದು, ತಾಲ್ಲೂಕುವಾರು ಮತ್ತು ಯೋಜನವಾರು ವಿವರ ಕೆಳಕಂಡಂತಿದೆ.

ಯೋಜನೆ	ತಾಲ್ಲೂಕು	ಗುರಿ	ನಿರ್ಮಿಸಲಾದ ಮನೆಗಳು
ಬಸವ ವಸತಿ ಯೋಜನೆ	ತೀರ್ಥಹಳ್ಳಿ	139	205
	ಭದ್ರಾವತಿ	232	223
	ಶಿಕಾರಿಪುರ	222	267
	ಶಿವಮೊಗ್ಗ	195	173
	ಸಾಗರ	215	425
	ಸೊರಬ	355	283
	ಹೊಸನಗರ	143	197
ಒಟ್ಟು		**1501**	**1773**
ವಾಜಪೇಯಿ ನಗರ ವಸತಿ ಯೋಜನೆ	ಕಾರಗಲ್ TP	3	3
	ತೀರ್ಥಹಳ್ಳಿ TP	7	0
	ಭದ್ರಾವತಿ CMC	43	39
	ಶಿಕಾರಿಪುರ TMC	44	31
	ಶಿರಳಾಲಕೊಪ್ಪ TP	29	4
	ಶಿವಮೊಗ್ಗ CMC	150	30
	ಸಾಗರ CMC	52	20
	ಸೊರಬ TP	14	1
	ಹೊಸನಗರ TP	7	1
ಒಟ್ಟು		**349**	**129**
ಒಟ್ಟಾರೆ		**1850**	**1902**

ಕ್ರ.ಸಂ	ಪ್ರಶ್ನೆ	ಉತ್ತರ
ಇ)	ರಾಜ್ಯದಲ್ಲಿ ವಸತಿ ಯೋಜನೆಯಲ್ಲಿ ಮಂಜೂರು ಆಗಿದ್ದ 3.00 ಲಕ್ಷ ಫಲಾನುಭವಿಗಳ ಮನೆಗಳನ್ನು	"ಮನೆ" ಮಾರ್ಗಸೂಚಿಯನ್ವಯ ನಿಗಮದಿಂದ ಕಾಮಗಾರಿ ಆದೇಶ ನೀಡಿದ 90 ದಿನಗಳೊಳಗಾಗಿ ಫಲಾನುಭವಿಯು ಮನೆಯ ಕಾಮಗಾರಿಯನ್ನು

	ತಡೆಹಿಡಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ತಡೆಹಿಡಿಯಲು ಕಾರಣವೇನು; ಈ ತಡೆಹಿಡಿದ ವಸತಿ ಯೋಜನೆಯನ್ನು ತೆರವು ಮಾಡಲು ಸರ್ಕಾರ ಬಯಸಿದೆಯೇ; (ವಿವರ ನೀಡುವುದು)	ಪ್ರಾರಂಭಿಸಬೇಕಿದ್ದು, ಒಂದು ವರ್ಷದೊಳಗಾಗಿ ಮನೆಯನ್ನು ಪೂರ್ಣಗೊಳಿಸ ಬೇಕಾಗಿರುತ್ತದೆ. ಹೀಗೆ ನಿಗದಿತ ಸಮಯದಲ್ಲಿ ಕಾಮಗಾರಿಯನ್ನು ಪ್ರಾರಂಭಮಾಡಿಕೊಳ್ಳದ ಮನೆಗಳನ್ನು ಮನೆ ಮಾರ್ಗಸೂಚಿಗಳನ್ವಯ ಬ್ಲಾಕ್ ಮಾಡಲಾಗಿತ್ತು. ಜನ ಪ್ರತಿನಿದಿಗಳ ಕೋರಿಕೆಯಂತೆ ಸರಕಾರವು ದಿನಾಂಕ:14.02.2020 ರಂದು ಆದೇಶ ಹೊರಡಿಸಿ ವಿವಿಧ ವಸತಿ ಯೋಜನೆಗಳಡಿ ನಿಗದಿತ ಸಮಯದಲ್ಲಿ ಪ್ರಾರಂಭಗೊಳ್ಳದೇ ಬ್ಲಾಕ್ ಆಗಿದ್ದ ಮನೆಗಳನ್ನು ತೆರವುಗೊಳಿಸಿ, ವಾಸ್ತವವಾಗಿ ಪ್ರಾರಂಭವಾಗಿರುವ ಮನೆಗಳ ಛಾಯಾಚಿತ್ರಗಳನ್ನು ಜಿಪಿಎಸ್ ಗೆ ಅಳವಡಿಸಲು ಒಂದೂವರೆ ತಿಂಗಳ ಕಾಲಾವಕಾಶವನ್ನು ನೀಡಲಾಗಿತ್ತು. ಈ ಅವಧಿಯಲ್ಲಿ ಜಿ.ಪಿ.ಎಸ್. ಮಾಡಿರುವ ಮನೆಗಳನ್ನು ಪ್ರಗತಿಗೆ ಪರಿಗಣಿಸಿ ಉಳಿದ ಎಲ್ಲಾ ಮನೆಗಳನ್ನು ಸರ್ಕಾರದ ಆದೇಶ ಸಂಖ್ಯೆ:ವಇ 12 ಹೆಚ್‌ಎಹೆಚ್ 2020, ದಿನಾಂಕ:19.05.2020 ರನ್ವಯ ರದ್ದುಪಡಿಸಲಾಗಿದೆ. ಸಾಕಷ್ಟು ಕಾಲಾವಕಾಶವನ್ನು ನೀಡಿದಾಗ್ಯೂ ಕೂಡ ಮನೆ ಪ್ರಾರಂಭ ಮಾಡಿಕೊಳ್ಳದಿರುವುದರಿಂದ ನಿಯಮಾನುಸಾರ ರದ್ದುಪಡಿಸಲಾಗಿದೆ.
(ಈ)	ರಾಜ್ಯದಲ್ಲಿ ವಸತಿ ಯೋಜನೆಗೆ ಬಿಡುಗಡೆಯಾದ ಅನುದಾನವೆಷ್ಟು; ಬಾಕಿ ಇರುವ ಫಲಾನುಭವಿಗಳ ವಿವರ ನೀಡುವುದು ?	ರಾಜ್ಯದಲ್ಲಿ ವಿವಿಧ ವಸತಿ ಯೋಜನೆಗಳಡಿ ಸರ್ಕಾರದ ಆದೇಶ ಸಂಖ್ಯೆ:ವಇ 54 ಹೆಚ್‌ಎಎಂ 2019, ದಿನಾಂಕ: 16.11.2019 ರಲ್ಲಿ ಪ್ರಗತಿಯಲ್ಲಿರುವ ಮನೆಗಳ ಪ್ರಗತಿಯನ್ನು ಜಿ.ಪಿ.ಎಸ್ ಗೆ ಅಳವಡಿಸಿ ಅರ್ಹಗೊಂಡ ನಂತರ ಸದರಿ ಮನೆಗಳನ್ನು ಮತ್ತೊಮ್ಮೆ Geo ಆಧಾರಿತ ವಿಜಿಲ್ ಆಪ್ ಮೂಲಕ ಗ್ರಾಮೀಣ ಪ್ರದೇಶದಲ್ಲಿ ಜಿಲ್ಲಾಪಂಚಾಯತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯವರ ಹಾಗೂ ನಗರ ಪ್ರದೇಶದಲ್ಲಿ ಜಿಲ್ಲಾಧಿಕಾರಿಯವರು ಪರಿಶೀಲಿಸಿ ಅರ್ಹಗೊಂಡ ಮನೆಗಳಿಗೆ ಆಧಾರ್ ಜೋಡಣೆಯಾದ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಪ್ರಸಕ್ತ ಆರ್ಥಿಕ ಸಾಲಿನ ಈ ವರಗೆ ರೂ.953.65 ಕೋಟಿಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ವಿಜಿಲ್ ಆಪ್ ಮೂಲಕ ಪರಿಶೀಲಿಸಿ, ಫಲಾನುಭವಿಗಳಿಗೆ ಅನುದಾನ ಬಿಡುಗಡೆ ಮಾಡುವಲ್ಲಿ ಆಗುತ್ತಿರುವ ವಿಳಂಬವನ್ನು ಗಮನಿಸಿ ಸರ್ಕಾರವು ಆದೇಶ ಸಂಖ್ಯೆ:ವಇ 12 ಹೆಚ್‌ಎಹೆಚ್ 2020, ದಿನಾಂಕ:01.02.2021 & 02.02.2021 ರಲ್ಲಿ ವಿಜಿಲ್ ಆಪ್ ಮೂಲಕ ಪರಿಶೀಲಿಸುವುದಕ್ಕೆ ದಿನಾಂಕ :31.03.2021 ರವರಗೆ ವಿನಾಯಿತಿ ನೀಡಲಾಗಿದ್ದು, ಅದರಂತೆ ಪ್ರಸ್ತುತ ಭೌತಿಕ ಪ್ರಗತಿಗನುಗುಣವಾಗಿ ಬಿಡುಗಡೆ ಬಾಕಿ ಇರುವ ಮನೆಗಳನ್ನು ಪರಿಶೀಲಿಸಿ ಅರ್ಹ ಫಲಾನುಭವಿಗಳಿಗೆ ಶೀಘ್ರವಾಗಿ ಅನುದಾನ ಬಿಡುಗಡೆ ಮಾಡಲು ಕ್ರಮ ವಹಿಸಲಾಗುತ್ತಿದೆ.

ಸಂಖ್ಯೆ :ವಇ 127 ಹೆಚ್‌ಎಎಂ 2021

(ವಿ. ಸೋಮಣ್ಣ)
ವಸತಿ ಸಚಿವರು